ಶ್ರೀ ಡಿ.ಟಿ ಜಯಕುಮಾರ್ (ಪ್ರವಾಸೋದ್ಯಮ ಸಚಿವರು):

ಅ) ಹೌದು. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯವು ಸಮದತ್ತಿ ನಗರದಲ್ಲಿರುವ ರಾಜ್ಯ ಸಂರಕ್ಷಿತ ಸ್ಮಾರಕವಾಗಿರುವ ಪರಸಗಡ ಕೋಟೆ ಸಂರಕ್ಷಣಾ ಕಾರ್ಯವನ್ನು 1991ರಲ್ಲಿ ರೂ.5.00 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲಾಗಿತ್ತು. 2002-03ನೇ ಸಾಲಿನಲ್ಲಿ ಕರ್ನಾಟಕ ಇನ್‌ಟ್ಯಾಕ್ ಸಂಸ್ಥೆಯು ಸಮದತ್ತಿ ಕೋಟೆ ಪರಿಸರ ಸೌಂದರ್ಯೀಕರಣವನ್ನು ರೂ.4.95 ಲಕ್ಷ ವೆಚ್ಚದಲ್ಲಿ ಹಾಗೂ ಸಮದತ್ತಿಯಲ್ಲಿನ ಮುರಡೇಶ್ವರ ದೇವಾಲಯದ ಪರಿಸರ ಸೌಂದರ್ಯೀಕರಣವನ್ನು ರೂ. 4.91 ಲಕ್ಷಗಳ ವೆಚ್ಚದಲ್ಲಿ ಕೈಗೊಂಡಿತ್ತು. ಪರಸಗಡ ಕೋಟೆ ಹಾಗೂ ಅದರ ಆವರಣದಲ್ಲಿರುವ ಶ್ರೀ ಕಾಡು ಸಿದ್ದೇಶ್ವರ ದೇವಸ್ಥಾನ ಸಂರಕ್ಷಣಾ ಕಾರ್ಯಕ್ಕಾಗಿ 2004-05ನೇ ಸಾಲಿನಲ್ಲಿ ರೂ. 13.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕ್ರಮ ಕೈಗೊಳ್ಳಲು ಈಗಾಗಲೇ ಟೆಂಡರ್ ಕರೆಯಲಾಗಿದೆ.

ಆ) ಸಮದತ್ತಿಯಲ್ಲಿ ರೂ. 42.13 ಲಕ್ಷಗಳ ವೆಚ್ಚದಲ್ಲಿ ಯಾತ್ರಿಕಾ ನಿವಾಸ ಹಾಗೂ ರೂ. 5.00 ಲಕ್ಷ ವೆಚ್ಚದಲ್ಲಿ ಶೌಚಾಲಯ ನಿರ್ಮಿಸಲಾಗಿದೆ.

98(459) ಶ್ರೀ ಮನೋಹರ್ ಕಲ್ಲಪ್ಪ ಕಿನೇಕರ್ (ಉಚ್ಚಗಾಂವ್) ವಾಣಿಜ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವಿರಾ?

ಅ) ಬೆಳಗಾಂ ಮತ್ತು ಖಾನಾಪುರ ತಾಲ್ಲೂಕುಗಳಲ್ಲಿ ಹೆಸ್ಕಾಂರವರು ಐ.ಪಿ. ಸೆಟ್ ಬಿಲ್ಲಿನ ಬಾಕಿ ಹೊಂದಿರುವವರ ಐ.ಪಿ. ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) 1.4.2003 ರಿಂದ 31.3.2004ರ ಅವಧಿಯು ಬರಗಾಲದ ವರ್ಷವಾಗಿದ್ದು ಐ.ಪಿ.ಸೆಟ್ ಬಾಕಿ ಬಿಲ್‌ಗೆ ಶೇಕಡ 24 ರಷ್ಟು ಬಡ್ಡಿಯನ್ನು ಸಂಗ್ರಹಿಸುತ್ತಿರುವುದು ಸರಿಯೇ ;

ಇ) ಐ.ಪಿ. ಸೆಟ್ ಸಂಪರ್ಕವನ್ನು ಮುಂದುವರಿಸಲು ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಹೌದು. ಹೆಸ್ಕಾಂ ಅಧಿಕಾರ ಪ್ರದೇಶದಲ್ಲಿ ಡಿಸೆಂಬರ್ 2004ರ ಅಂತ್ಯಕ್ಕೆ ಒಟ್ಟು ರೂ. 167.65 ಕೋಟಿಗಳ ನಿವ್ವಳ ಬಾಕಿಯು ಐ.ಪಿ.ಸೆಟ್‌ಗಳ ಸ್ಥಾಪಿತರಿಂದ ಬರಬೇಕಾಗಿದೆ. ಐ.ಪಿ. ಸೆಟ್‌ಗಳ ಬಾಕಿಯನ್ನು ಸಂಗ್ರಹಿಸುವ ಪ್ರಯತ್ನದಲ್ಲಿ ಹೆಸ್ಕಾಂರವರು ಬೆಳಗಾಂ, ಖಾನಾಪುರ ಪ್ರದೇಶಾನ್ನೊಳಗೊಂಡಂತೆ ಹೆಸ್ಕಾಂ ಕಾರ್ಯವ್ಯಾಪ್ತಿಯಲ್ಲಿನ ಪ್ರದೇಶದ ಐ.ಪಿ. ಸೆಟ್‌ಗಳ ಸಂಪರ್ಕವನ್ನು ಕಡಿತಗೊಳಿಸಲಾಗಿದೆ.

ಆ) ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ವಿದ್ಯುತ್ ಸರಬರಾಜು ಮತ್ತು ವಿತರಣೆ ಕೋಡ್-2001ರಲ್ಲಿ ಎಲ್ಲಾ ಬಾಕಿಗಳಿಗೆ ವರ್ಷಕ್ಕೆ ಶೇಕಡ 24ರ ಸರಳ ಬಡ್ಡಿಯನ್ನು ಅಥವಾ ಪ್ರತಿ ತಿಂಗಳಿಗೆ ಬಾಕಿಯ ಶೇಕಡ 2 ರಷ್ಟು ದಂಡವನ್ನು ವಿಧಿಸಲು ಅವಕಾಶವಿದೆ. ಆದ್ದರಿಂದ ಐ.ಪಿ. ಸೆಟ್‌ಗಳ ಬಾಕಿಯನ್ನು ನಿಯಮಗಳನ್ವಯ ಬಡ್ಡಿಯನ್ನು ವಿಧಿಸಿ ವಸೂಲು ಮಾಡಲಾಗುತ್ತಿದೆ.

ಇ) ವಿದ್ಯುತ್ ಸರಬರಾಜು ಪ್ರತಿ ಯೂನಿಟ್‌ನ ವೆಚ್ಚವೂ ರೂ. 3.73 ಆಗಿದೆ. ಐ.ಪಿ. ಬಳಕೆದಾರರು ಅದಕ್ಕೆ ವಿರುದ್ಧವಾಗಿ ಪ್ರತಿ ಯೂನಿಟ್‌ಗೆ (ಸರಾಸರಿ) ಕೇವಲ 63 ಪೈಸೆಯಾಗಿದೆ ಮತ್ತು ಬಾಕಿಯೂ ಇತರೆ ಪ್ರವರ್ಗಗಳ ಸ್ಥಾಪನೆಗಳ ರಿಯಾಯಿತಿಯ ದರದಲ್ಲಿ ಕರ್ನಾಟಕ ಸರ್ಕಾರವು ರಿಯಾಯಿತಿ ನೀಡುವುದರ ಮೂಲಕ ಉತ್ತೇಜನ ನೀಡುತ್ತಿದೆ. 2004-05ರ ಸಾಲಿನಲ್ಲಿ ಬೇಕಾಗಿರುವ ಅಂದಾಜು ರಿಯಾಯಿತಿಯು 1872 ಕೋಟಿ ರೂ.ಗಳಾಗಿವೆ. ಈ ರಿಯಾಯಿತಿಯ ಬಿಡುಗಡೆಯು ಐ.ಪಿ. ಸೆಟ್‌ಗಳ ಬಾಕಿ ವಸೂಲಾತಿಯ ಸಾಮರ್ಥ್ಯತೆಯ ಮೇಲೆ ಜೋಡಣೆಗೊಂಡಿದೆ. ಈ ಕಾರಣವಾಗಿ ಐ.ಪಿ. ಸೆಟ್ ಬಳಕೆದಾರರು ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ತೀವ್ರವಾದ

ಆರ್ಥಿಕ ತೊಂದರೆಯಲ್ಲಿರುವುದರಿಂದ ಐ.ಪಿ. ಸೆಟ್ ಬಳಕೆದಾರರು ವಿದ್ಯುತ್ ಸ್ಥಗಿತವನ್ನು ತಡೆಗಟ್ಟಲು ಮತ್ತು ಐ.ಪಿ. ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಮುಂದುವರಿಸಲು ಕಾಲಕಾಲಕ್ಕೆ ವಿದ್ಯುತ್ ಬಾಕಿಯನ್ನು ಪಾವತಿ ಮಾಡುವುದರೊಂದಿಗೆ ಸಹಕರಿಸಬೇಕು.

99(693) ಶ್ರೀ ನಿಂಗಪ್ಪ ಹೆಚ್. (ಕುಣಿಗಲ್) ಮಾನ್ಯ ಲೋಕೋಪಯೋಗಿ ಮತ್ತು ಇಂದನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರೈತರ ನೀರಾವರಿ ಪಂಪ್ ಸೆಟ್‌ಗಳ ವಿದ್ಯುತ್ ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ :

ಆ) ಸಕ್ರಮಗೊಳಿಸಲು ಕ್ರಮ ಕೈಗೊಂಡಲ್ಲಿ ಕಂಬ, ತಂತಿ ಮತ್ತು ಇನ್ನಿತರ ಸಾಮಾಗ್ರಿಗಳನ್ನು ರೈತನೇ ಒದಗಿಸಿಕೊಂಡು ಸಂಪರ್ಕ ಪಡೆದುಕೊಂಡಿರುವುದರಿಂದ ಕನಿಷ್ಟ ಶುಲ್ಕ ಮಾತ್ರ ವಿಧಿಸಿ ಸಕ್ರಮಗೊಳಿಸುವುದು ಉಚಿತವಲ್ಲವೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ ಮತ್ತು ಆ) 'ನಿಮ್ಮದೇ ಆದ ಸ್ವಂತ ಟ್ರಾನ್ಸ್‌ಫಾರ್ಮರ್‌ನ್ನು ಹೊಂದಿ' (ಓವೈಟಿ) ಯೋಜನೆಯಡಿ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಕ್ರಮೀಕರಣಕ್ಕೆ ಸರ್ಕಾರವು ಈ ಹಿಂದೆ ದಿನಾಂಕ 21-10-2003ರ ಆದೇಶ ಸಂಖ್ಯೆ ಡಿಇ 59 ಪಿಎಸ್‌ಆರ್ 2003ರಲ್ಲಿ ಆದೇಶವನ್ನು ನೀಡಿತ್ತು. ಆದರೆ ಈ 'ಓವೈಟಿ' ಯೋಜನೆಯಡಿ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಕ್ರಮೀಕರಣಕ್ಕೆ ರೈತರಿಂದ ಬಹಳ ನೀರಸ ಪ್ರತಿಕ್ರಿಯೆ ಬಂದಿರುತ್ತದೆ. ಇದಕ್ಕೆ ಕಾರಣ ಈ ಯೋಜನೆಯಡಿ ಪ್ರತಿ ಪಂಪ್‌ಸೆಟ್‌ದಾರನು ಸಕ್ರಮಗೊಳಿಸಲು 25,000/- ರೂ.ಗಳನ್ನು ಪಾವತಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಕ್ರಮೀಕರಣಕ್ಕೆ 'ಓವೈಟಿ' ಯೋಜನೆಗೆ ಬದಲಾಗಿ ಇನ್ನೊಂದು ಹೊಸ ಪ್ರಸ್ತಾವನೆಯು ಈಗ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಪ್ರಸ್ತಾವನೆಯ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಂಡ ನಂತರವೇ ಸಕ್ರಮೀಕರಣದ ಬಗ್ಗೆ ಶುಲ್ಕವನ್ನು ನಿಗದಿಪಡಿಸಬೇಕಾಗಿರುತ್ತದೆ. ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಕ್ರಮೀಕರಣಕ್ಕೆ ಶುಲ್ಕವನ್ನು ವಿಧಿಸುವುದಕ್ಕೆ ಮುಖ್ಯ ಕಾರಣಗಳು:

1. ಹಿರಿತನವನ್ನು ಬಿಟ್ಟು, ಮೊದಲು ಆದ್ಯತೆ ಮೇರೆಗೆ ಅನಧಿಕೃತ ನೀರಾವರಿ ಪಂಪುಸೆಟ್ಟುಗಳನ್ನು ಅಧಿಕೃತಗೊಳಿಸಲಾಗುತ್ತದೆ. ಅಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆಯಬೇಕಾಗಿದ್ದಲ್ಲಿ ನೀರಾವರಿ ಪಂಪುಸೆಟ್ಟು ಅರ್ಜಿದಾರನು ತನ್ನ ಹಿರಿತನ ಬರುವವರೆಗೆ ಸರತಿಯಲ್ಲಿ ಕಾಯಬೇಕಾಗಿತ್ತು.
2. ಅನಧಿಕೃತವಾಗಿ ಇಷ್ಟುವರೆಗೆ ವಿದ್ಯುತ್ತನ್ನು ಉಪಯೋಗ ಮಾಡಿದಕ್ಕೆ, ದಂಡವನ್ನು ವಿಧಿಸುವುದು ನ್ಯಾಯ.
3. ಹೆಚ್ಚುವರಿಯಾಗಿ ವಿತರಣಾ-ಟ್ರಾನ್ಸ್‌ಫಾರ್ಮರ್‌ಗಳನ್ನು ವಿತರಣಾ ವ್ಯವಸ್ಥೆಗೆ ಸೇರ್ಪಡೆಗೊಳಿಸಿ. ವಿತರಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಬೇಕಾಗುವ ಹಣವನ್ನು ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಬಳಕೆದಾರರು ಭಾಗಶಃವಾದರೂ ಭರಿಸಬೇಕು. ಈ ಹಿನ್ನೆಲೆಯಲ್ಲಿ ಶುಲ್ಕ ವಿಧಿಸುವ ವಿಷಯದಲ್ಲಿ ಏಕ ರೂಪದ ನೀತಿಯನ್ನು ಅನುಸರಿಸುವುದು ಅಪೇಕ್ಷಣೀಯವಾಗಿರುತ್ತದೆ.